ಕಟ್ಟಿದ್ದರು, ಒಂದು ಮಗ್ಗುಲಲ್ಲಿ ಹುಲ್ಲು ಒಟ್ಟಿದ್ದರು.

ಅಪರಿಚಿತನೊಬ್ಬ ವಾಡೆ ನೋಡಲು ಬಂದಿದ್ದಾನೆ ಅನ್ನೋದು ಗೊತ್ತಾಗುತ್ತಿದ್ದಂತೆ ಊರ ಜನ ಒಬ್ಬೊಬ್ಬರಾಗಿ ಅಲ್ಲಿಗೆ ಬಂದರು. ನೀವು ಯಾರು? ಯಾಕೆ ಬಂದ್ರಿ ಎನ್ನುವಂತೆ ರಾಜೀವನ ಮುಖ ನೋಡಿದರು. ರಾಜೀವ ಸಂಕ್ಷಿಪ್ತವಾಗಿ ತನ್ನ ಪರಿಚಯ ಹೇಳಿಕೊಂಡ. 'ಮಾಧವರಾವ್ ರಾನಡೆ ಅವರ ಮಗ ಸುಹಾಸ ರಾನಡೆ ಬೆಂಗಳೂರಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಅಂತ್ಯಕ್ರಿಯೆ ಇನ್ನೂ ಆಗಿಲ್ಲ. ಬಾಡಿ ಆಸ್ಪತ್ರೆ ಮಾರ್ಚರಿಯಲ್ಲಿದೆ. ಅದನ್ನು ಒಯ್ದು ಅಂತ್ಯಕ್ರಿಯೆ ಮಾಡಲು ರಾಯಭಾಗದಿಂದ ಹತ್ತದಿನ್ನೈದಿಪ್ಪತ್ತು ಜನ ಬೆಂಗಳೂರಿಗೆ ಬಂದಿದ್ದರು. ಅವರಲ್ಲಿ ಯಾರೂ ಸುಹಾಸನ ಸಂಬಂಧಿಕರಿಲ್ಲ ಅಂತ ಪೊಲೀಸರು ಹೇಳಿದರು. ಸುಹಾಸ ನನ್ನ ಮನೆಯಲ್ಲಿ ಬಾಡಿಗೆಗೆ ಇದ್ದ. ಅವನ ಸಂಬಂಧಿಗಳನ್ನು ಹುಡುಕಿ ಕರಕೊಂಡು ಹೋಗಿ ಅವನ ಹೆಣಕ್ಕೆ ಒಂದು ದಾರಿ ತೋರಿಸಬೇಕು ಅಂತ ನಾನು ಬಂದಿದ್ದೀನಿ. ನನಗೆ ನಿಮ್ಮ ಸಹಾಯ ಬೇಕು. ಸುಹಾಸನ ಬಂಧುಗಳು ಯಾರಿದ್ದಾರೆ? ಅವರು ಎಲ್ಲಿದ್ದಾರೆ ಅನ್ನೋದು ಗೊತ್ತಿದ್ದರೆ ತಿಳಿಸಿ' ಎಂದು ಕೇಳಿಕೊಂಡ. ಊರ ಜನ ರಾಜೀವನ ಮುಖ ನೋಡಿದರೇ ಹೊರತು ಏನೂ ಹೇಳಲಿಲ್ಲ. ನಿನ್ನ ಮಾತು ನಮಗೆ ಅರ್ಥ ಆಗಲಿಲ್ಲ ಎನ್ನುವಂತೆ ಸುಮ್ಮನೆ ನಿಂತಿದ್ದರು.

ಐದಾರು ನಿಮಿಷಗಳು ಕಳೆದ ಮೇಲೆ ಗುಂಪಲ್ಲಿದ್ದ ಹಿರಿಯನೊಬ್ಬ ಮುಂದೆ ಬಂದು 'ಮಾಧವರಾವ ಧಣಿಗಳು ಸತ್ತು ಭಾಳ್ ವರ್ಷಗಳಾದ್ವು. ಅವರ ಹೆಂಡ್ತಿ, ಮಕ್ಕಳು ಎಲ್ಲಿದ್ದಾರ ಅನ್ನೋದು ಗೊತ್ತಿಲ್ರಿ. ಧಣಿಗಳ ಹೊಲಾನ ನಮ್ಮೂರವರು ಸಾಗುವಳಿ ಮಾಡ್ತಾರ್ರಿ. ಧಣಿಗಳ ತಮ್ಮ ಅಂತ ಹೇಳಿಕೊಂಡು ಒಬ್ಬಾವ್ನ ಬಾಳಾ ಹಿಂದಕ ಬಂದಿದ್ದನ್ರಿ. ಅವ್ನ



ನಾ ಮೀರಜ್‌ನಾಗ ಇರತೀನಿ ಅಂತ ಹೇಳಿದ್ದ ನೆನಪೈತಿ. ಧಣಿಗಳ ಮಗ ಬೆಂಗಳೂರಾಗ ಉರುಲು ಹಾಕ್ಕೊಂಡರಂತ ಅಂತ ನಮ್ಮೂರಿನ ಐದಾರು ಮಂದಿ ಬೆಂಗೂರಿಗೆ ಹೋಗಿರೋದು ಖರೇ ಐತಿ. ಇದಕ್ಕಿಂತ ಹೆಚ್ಚು ನಮಗೇನೂ ಗೊತ್ತಿಲ್ಲ' ಎಂದು ಹೇಳಿದ. 'ವಾಡೆಯನ್ನು ನೋಡಬೇಕು' ಎಂದು ರಾಜೀವ ಕೇಳಿದಕ್ಕೆ 'ನಮ್ಮ ಕಡಿ ಚಾವಿ ಇಲ್ಲ' ಎಂಬ ಉತ್ತರ ಬಂತು.

ಈ ವಾಡೆ, ಹೊಲಗಳು ಪೂನಾದ ವಿಠಲ ದೇಸಾಯಿಯವರದು ಅನ್ನೋದು ಊರವರಿಗೆ ಗೊತ್ತಿಲ್ಲ! ಅವು ಮಾಧವರಾವ್ ರಾನಡೆಯವರ ಆಸ್ತಿಗಳು ಎಂದು ಭಾವಿಸಿದ್ದಾರೆ!. ಸುಹಾಸ ಯಾರ ಮಗ ಅನ್ನೋದೂ ಗೊತ್ತಿಲ್ಲ! ಯಾರದೋ ಹೊಲಗಳನ್ನು ಇನ್ಯಾರೋ ಅನುಭವಿಸ್ತಿದ್ದಾರೆ! ಜೀರ್ಣಸ್ಥಿತಿಯಲ್ಲಿರುವ ವಾಡೆ ವಿಠಲ ದೇಸಾಯಿಯ ಅಸ್ಥಿಪಂಜರದಂತೆ ರಾಜೀವನಿಗೆ ಭಾಸವಾಯಿತು. ಅಲ್ಲೇ ಇದ್ದ ಮರಕಣಗಿಲೆ ಬುಡದಲ್ಲಿ ಕೂತು ಒಮ್ಮೆ ವಾಡೆಯನ್ನೇ ದಿಟ್ಟಿಸಿದ. ವಿಠಲರಾವ್ ದೇಸಾಯಿ ಹೇಗಿದ್ದರು? ಹತ್ತಾರು ಎಕರೆ ಹೊಲಗಳನ್ನು ಅವರು ಸಂಪಾದಿಸಿದ್ದು ಹೇಗೆ ಎಂದು ಯೋಚಿಸಿದ. ಸ್ವಲ್ಪ ಹೊತ್ತಿನ ಮೇಲೆ ಎದ್ದು ಕಿಟಕಿಯ ಮೂಲಕ ವಾಡೆಯೊಳಗೆ ಇಣುಕಿದ. ಒಳಗೆ ಮಬ್ಬು ಕತ್ತಲು. ಬಾವಲಿಗಳ ಹಿಕ್ಕೆಯ ಕಮಟು ವಾಸನೆ. ಒಳಗೆ ಕತ್ತಲಲ್ಲೂ ಒಂದು ಚಿತ್ತಾರದ ಪಲ್ಲಂಗ ಕಾಣಿಸಿತು. ದೇಸಾಯಿಗಳ ಪಲ್ಲಂಗ! ಅವರ ವಿಲಾಸಿ ಜೀವನದ ಪಳೆಯುಳಿಕೆಯಂತೆ ಕಾಣಿಸಿತು. ಎಷ್ಟು ಹೆಣ್ಣುಗಳ ಜತೆ ಇದೇ ಪಲ್ಲಂಗದ ಮೇಲೆ ದೇಸಾಯಿ ತಮ್ಮ ಮೈಯ ಸೊಕ್ಕನ್ನು ಇಳಿಸಿಕೊಂಡಿದ್ದರೋ?

ಹೆಣ್ಣು, ಹೊನ್ನು, ಭೂಮಿ ಎಲ್ಲ ಕಾಲಕ್ಕೂ ಒಬ್ಬನ ಸ್ವತ್ತಾಗಿ ಉಳಿಯಲು ಸಾಧ್ಯವಿಲ್ಲವಂತೆ. ಈ ಪಲ್ಲಂಗವೂ ಹಾಗೆ ಅನ್ನಿಸಿತು ರಾಜೀವನಿಗೆ.

ಸುಹಾಸ ನೆನಪಾದ. ಅವನದು ಅನಾಮಧೇಯನ ಹೆಣ ಎಂದು ಪೊಲೀಸ್ ದಾಖಲೆಗಳಲ್ಲಿ ಉಳಿಯಬಾರದು. ಅವನ ಅಂತ್ಯಕ್ರಿಯೆ ಮಾಡಿ ಮುಗಿಸಬೇಕು ಅನ್ನಿಸುತ್ತಿದ್ದಂತೆ ಭಾವುಕನಾದ. ಮೊದಲು ಇಲ್ಲಿಂದ ಹೋಗಬೇಕು ಅನ್ನಿಸಿ ವಾಡೆಯ ಅಂಗಳದಿಂದ ಹೊರ ಬಂದ. ●